Admissions to the Medical Colleges

931 SRI K. M. THAMMAIAH (Kadur).—Will the Minister for Health and Family Welfare be pleased to state :—

(*a*) The No. of students who were admitted to the Medical Colleges (both Govt, & Private) during this year.

(*b*) Among them the No. of students coming from the rural areas?

SRI M. MALLAPPA (Minister for Health and Family Welfare)

(*a*) 353 in Govt. Medical Colleges and 501 in Private Medical Colleges.

(*b*) 114 in Govt. Medical Colleges and 174 in Private Medical Colleges.

ಶ್ರೀ ಕೆ. ಎಂ. ತಮ್ಮಯ್ಯ.— ಸ್ವಾಮಿ, ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ೩೫೩ ಮಂದಿ ಹಾಗೂ ಖಾಸಗೀ ವೈದ್ಯಕೀಯ ಕಾಲೇಜುಗಳಲ್ಲಿ ೫೦೧ ಮಂದಿ ಒಟ್ಟು ೮೫೪ ಮಂದಿಗೆ ಮೆಡಿಕಲ್ ಕಾಲೇಜುಗಳಲ್ಲಿ ಸೀಟ್‌ಗಳನ್ನು ಹಂಚಿದ್ದೀರಿ. ಅವುಗಳ ಪೈಕಿ ೨೮೮ ಸೀಟುಗಳನ್ನು ಹಳ್ಳಿಗಾಡಿನ ವಿದ್ಯಾರ್ಥಿಗಳಿಗೆ ಕೊಟ್ಟಿದ್ದೇವೆ ಎಂದು ಹೇಳಿದ್ದೀರಿ. ಇದನ್ನು ಯಾವ ಆಧಾರದ ಮೇಲೆ ಕೊಟ್ಟಿದ್ದೀರಿ? ಜನಸಂಖ್ಯೆಯ ಆಧಾರದ ಮೇಲೆ ಕೊಟ್ಟಿದ್ದೀರಾ ಅಥವಾ ಅರ್ಹತೆಯ ಆಧಾರದ ಮೇಲೆ ಕೊಟ್ಟಿದ್ದೀರಾ ಎಂಬುದನ್ನು ತಿಳಿಸುತ್ತೀರಾ?

† SRI M. MALLAPPA.— 45% of the seats are reserved in Private Medical Colleges for Karnataka students free and 10% of the seats are reserved for being allotted by the management. Out of the remaining seats, 23 seats have been given to Karnataka students on donation of Rs. 50,000 and the remaining seats given to students outside India on a donation of 15,000 dollars. ಹಾವನೂರ್ ವರದಿ ಪ್ರಕಾರ ಹರಿಜನಗಿರಿಜನ ವಂತ್ತು ಹಿಂದುಳಿದ ವರ್ಗದವರಿಗೆ ಎಷ್ಟು ರಿಸರ್ವೇಷನ್ ಪ್ರಕಾರ ಕೊಡಬೇಕೋ ಅದನ್ನು ದಾಮಾಷಾ ಪ್ರಕಾರ ಕೊಟ್ಟು ಉಳಿದ ಸೀಟುಗಳನ್ನು ಮೆರಿಟ್ ಮೇಲೆ ಕೊಟ್ಟಿದ್ದೇವೆ.

ಶ್ರೀ ಕೆ. ಎಂ. ತಮ್ಮಯ್ಯ.— ಹಳ್ಳಿಗಾಡಿನ ರೈತರ ಮಕ್ಕಳಿಗೆ, ಹಿಂದುಳಿದವರಿಗೆ ಹರಿಜನಗಿರಿಜನರಿಗೆ ಸಹಾಯ ಮಾಡಬೇಕು ಎಂಬುದು ನಮ್ಮ ಸರ್ಕಾರದ ಧೋರಣೆಯಾಗಿದೆ ಆದರೆ ಈಗ ನೋಡಿದರೆ ಬರೀ ನಗರದಲ್ಲಿರುವವರಿಗೆ ಮತ್ತು ಹಣ ಕೊಡುವವರಿಗೆ ಮಾತ್ರ ಸೀಟುಗಳು ಮೆಡಿಕಲ್ ಕಾಲೇಜುಗಳಲ್ಲಿ ಸಿಗುತ್ತಿದೆ ಎಂದು ತೋರುತ್ತಿದೆ. ಇದರಿಂದ ರಾಜ್ಯಾಂಗದಲ್ಲಿ ಹಳ್ಳಿಗಾಡಿನವರಿಗೆ ಮತ್ತು ಹಿಂದುಳಿದವರಿಗೆ ಅವಕಾಶ ಕೊಡಬೇಕು ಎಂದು ಏನು ನಿಯಮ ಇದೆ ಅದರ ಉಲ್ಲಂಘನೆಯಾದಂತಾಗುವುದಿಲ್ಲವೇ? ನಿಯಮದ ಪ್ರಕಾರ ವರ್ಷೇ ವರ್ಷೇ ನಡೆದುಕೊಳ್ಳುತ್ತಿದ್ದೀರಾ?

ಶ್ರೀ ಎಂ. ಮಲ್ಲಪ್ಪ.— ಎರಡೂ ಸಮತೋಲನವಾಗಬೇಕು. ಮೆರಿಟ್ ವಿದ್ಯಾರ್ಥಿಗಳಿಗೂ ನಾವು ಸೀಟುಗಳನ್ನು ಕೊಡಲೇಬೇಕಾಗುತ್ತದೆ ಮತ್ತು ಹಳ್ಳಿಗಾಡಿನಿಂದ ಬಂದಂಥವರಿಗೂ ಸೀಟುಗಳನ್ನು ಕೊಡಬೇಕಾಗುತ್ತದೆ ಅದಕ್ಕಾಗಿ ರೂಲ್ಸ್ ಇದೆ. ಅದನ್ನು ಅನುಸರಿಸಿ ೧೧೪ ಪ್ರವೇಶಗಳನ್ನು ಸರ್ಕಾರೀ ಕಾಲೇಜಿನಲ್ಲೂ ೧೭೪ ಪ್ರವೇಶಗಳನ್ನು ಖಾಸಗಿ ಕಾಲೇಜುಗಳಲ್ಲೂ ಕೊಟ್ಟಿದೆ. ಮಾನ್ಯ ಸದಸ್ಯರು ಹೇಳಿದಂತೆ ಅವರಿಗೂ ಪ್ರಾತಿನಿಧ್ಯ ಸಿಕ್ಕಿದೆ.

ಶ್ರೀ ಕೆ. ಎಂ. ತಮ್ಮಯ್ಯ.— ೧೧೪ ಜನ ಹಳ್ಳಿಗಾಡಿನವರಿಗೆ ಸರ್ಕಾರೀ ಕಾಲೇಜಿನಲ್ಲಿ ಪ್ರವೇಶ ಕೊಟ್ಟಿದ್ದೀರಿ. ಅದನ್ನು ಮೆರಿಟ್ ಮೇಲೆ ಕೊಡುತ್ತೇವೆ ಎಂದು ಹೇಳುತ್ತೀರಿ. ಹಳ್ಳಿಗಾಡಿನ ಮಕ್ಕಳು

ಮೆರಿಟ್‌ನಲ್ಲಿ ಪಾಸ್ ಮಾಡುವುದಕ್ಕೆ ಅವರಿಗೆ ಏನೇನು ಅನುಕೂಲಗಳನ್ನು ಮಾಡಿಕೊಟ್ಟಿದ್ದೀರಿ? ಹಳ್ಳಿಗಾಡಿನಲ್ಲಿರುವ ಶಾಲೆಗಳಿಗೆ ಲ್ಯಾಬೊರೇಟರಿ ಸೌಲಭ್ಯಗಳನ್ನು ಕೊಟ್ಟಿದ್ದೀರಾ? ಸರಿಯಾಗಿ ಉಪಾಧ್ಯಾಯರನ್ನು ಕೊಟ್ಟಿದ್ದೀರಾ ಲೈಬ್ರರಿಗಳನ್ನು ಕೊಟ್ಟಿದ್ದೀರಾ? ಏನೂ ಇಲ್ಲದೇ ಅಪ್ಪ, ಅಮ್ಮ ಕೂಡ ಏನೂ ಓದದೆ ಇರುವಂಥ ಮಕ್ಕಳು ೮೫ ಪರ್ಸೆಂಟ್ ಮಾರ್ಕ್ಸ್ ತೆಗೆದುಕೊಂಡು ಸೀಟು ಪಡೆಯಬೇಕು ಎಂದು ಹೇಳಿದರೆ ಅದು ಹೇಗೆ ಸಾಧ್ಯ? ಖಾಸಗಿ ಮೆಡಿಕಲ್ ಕಾಲೇಜಿನವರಿಗೆ ನೀವು ಹಣ ಮಾಡಿಕೊಳ್ಳಿ ಎಂದು ಅವಕಾಶ ಕೊಟ್ಟಿದ್ದೀರಿ. ಹಣ ಕೊಟ್ಟವರಿಗೆ ಅವರು ಸೀಟುಗಳನ್ನು ಕೊಡುತ್ತಾರೆ. ನಿಮಗೆ ನಮ್ಮ ರಾಜ್ಯದಲ್ಲಿರುವ ಹಳ್ಳಿಗಾಡಿನ ಮಕ್ಕಳು ರೈತರ ಮಕ್ಕಳು ಡಾಕ್ಟರು ಇಂಜಿನಿಯರು ಆಗಬೇಕು ಎಂಬುದೂ ಮುಖ್ಯವೋ ಅಥವಾ ಅವರು ಹಣ ಮಾಡಿಕೊಳ್ಳಲಿ ಎಂಬುದು ಮುಖ್ಯವೋ?

ಶ್ರೀ ಎಂ. ಮಲ್ಲಪ್ಪ.— ಈಗ ಶೇಕಡ ೪೫ ರಷ್ಟು ಪ್ರವೇಶಗಳನ್ನು ಕರ್ನಾಟಕದ ವಿದ್ಯಾರ್ಥಿಗಳಿಗೆ ಮೆರಿಟ್ ಆಧಾರದ ಮೇಲೆ ಕೊಡುತ್ತಿದ್ದೇವೆ. ಇನ್ನುಳಿದ ೧೦ ಭಾಗ ಪ್ರವೇಶಗಳನ್ನು ಮ್ಯಾನೇಜ್‌ಮೆಂಟಿನವರ ವತಕ್ಕೆ ಕೊಟ್ಟಿದ್ದೇವೆ. ಸರ್ಕಾರ ಸಹಾಯಧನವನ್ನೂ ಕೊಡುತ್ತಿಲ್ಲ. ನಾವು ಅವರಿಗೆ ಎಲ್ಲವನ್ನೂ ಹಾಗೆಯೇ ಕೊಡಿ ಎಂದರೆ ಅವರು ಕಾಲೇಜುಗಳನ್ನು ನಡೆಸುವುದಾದರೂ ಹೇಗೆ? ಅವರ ಸ್ಟ್ರಿಕ್ಚರ್‌ಗಳನ್ನೂ ಯೋಚನೆ ಮಾಡಬೇಕು. ಕರ್ನಾಟಕದ ವಿದ್ಯಾರ್ಥಿಗಳಿಗೆ ಈಗ ಹೆಚ್ಚಿನ ಪ್ರಾತಿನಿಧ್ಯ ಸಿಕ್ಕಿದೆ. ಇದನ್ನು ನೋಡಿ ನೀವು ಸಂತೋಷ ಪಡಬೇಕು. ಇನ್ನೂ ಅನುಕೂಲಗಳನ್ನು ಮಾಡುವುದಕ್ಕೆ ಸಾಧ್ಯವಾದರೆ ಪ್ರಯತ್ನ ಮಾಡೋಣ. ಈಗ ಹಿಂದಿಗಿಂತ ಹೆಚ್ಚು ಅನುಕೂಲ ನಮ್ಮ ವಿದ್ಯಾರ್ಥಿಗಳಿಗೆ ಆಗುತ್ತಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.— ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ ಉದ್ದೇಶ ಮಾನ್ಯ ಮಂತ್ರಿಗಳಿಗೆ ಅರ್ಥವಾಗಿಲ್ಲ ಎಂದು ಕಾಣುತ್ತದೆ. ಇವರು ಕೊಟ್ಟಿರುವ ಅಂಕಿ ಸಂಖ್ಯೆಗಳ ಪ್ರಕಾರ ನಗರದಲ್ಲಿ ವಾಸ ಮಾಡತಕ್ಕ ವಿದ್ಯಾರ್ಥಿಗಳಿಗೆ ಹೆಚ್ಚು ಪ್ರವೇಶಗಳು ಸಿಕ್ಕಿರುವುದು ಗೊತ್ತಾಗುತ್ತದೆ. ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳಿಗೆ ಕಡಿಮೆ ಪ್ರವೇಶಗಳು ಸಿಕ್ಕಿವೆ. ಕೃಷಿ ವಿಶ್ವವಿದ್ಯಾನಿಲಯದ ಕಾಲೇಜುಗಳಲ್ಲಿ ಪ್ರವೇಶ ನೀಡುವಾಗ ರೈತರ ಮಕ್ಕಳಿಗೆ ೫ ಪರ್ಸೆಂಟ್ ರಿಸರ್ವೇಷನ್ ಇಟ್ಟಿದ್ದಾರೆ. ಆದರೆ ಆ ರೀತಿ ಮೆಡಿಕಲ್ ಕಾಲೇಜುಗಳಲ್ಲಿ ಸೀಟುಗಳನ್ನು ನೀಡುವಾಗ ಮಾಡುವುದಿಲ್ಲ. ಗ್ರಾಮಾಂತರ ಪ್ರದೇಶದಲ್ಲಿ ಓದುವ ಮಕ್ಕಳಿಗೆ ಅನೇಕ ಸೌಲಭ್ಯಗಳಿರುವುದಿಲ್ಲ. ನಗರದಲ್ಲಿ ಓದುವ ಮಕ್ಕಳಿಗೆ ಹೆಚ್ಚು ಸೌಲಭ್ಯಗಳು ಇರುತ್ತವೆ. ಈ ಒಂದು ಕಾರಣದಿಂದ ಸರ್ಕಾರ ಏನಾದರೂ ಯೋಚನೆ ಮಾಡಿ ಗ್ರಾಮಾಂತರ ಪ್ರದೇಶದಲ್ಲಿ ಇರತಕ್ಕ ಮಕ್ಕಳಿಗೆ ಹೆಚ್ಚು ಪ್ರವೇಶ ಸಿಗುವುದಕ್ಕೆ ಅವಕಾಶವಾಗುವಂತೆ ಏನಾದರೂ ಮಾಡುವುದಕ್ಕೆ ನಿಯಮ ಮಾಡುತ್ತೀರಾ?

ಶ್ರೀ ಎಂ. ಮಲ್ಲಪ್ಪ.— ತಮ್ಮ ಅಭಿಪ್ರಾಯವನ್ನು ನಾನೂ ಒಪ್ಪುತ್ತೇನೆ. ಪಟ್ಟಣಪ್ರವೇಶದ ಶಾಲಾ ಕಾಲೇಜುಗಳಲ್ಲಿ ಏನೇನು ಸೌಲಭ್ಯಗಳನ್ನು ಕೊಟ್ಟಿದ್ದೇವೋ ಅಷ್ಟು ಸೌಲಭ್ಯಗಳನ್ನು ಹಳ್ಳಿಗಾಡಿನ ಶಾಲಾ ಕಾಲೇಜುಗಳಲ್ಲಿ ಕೊಟ್ಟಿಲ್ಲ ಎಂಬ ಮಾತನ್ನು ನಾನೂ ಒಪ್ಪುತ್ತೇನೆ. ಆದರೆ ಇವತ್ತು ಐ.ಐ.ಎಂ. ಮತ್ತು ವಿಶ್ವವಿದ್ಯಾನಿಲಯದ ನಿಯಮಾವಳಿಗೆ ವಿರೋಧವಾಗಿ ಹಳ್ಳಿಗಾಡಿನ ಮಕ್ಕಳಿಗೆ ಹೆಚ್ಚು ಸೌಲಭ್ಯಗಳನ್ನು ಒದಗಿಸಿ ಕೊಡುವುದು ಸರಿಯೇ ಅಲ್ಲವೇ ಎಂಬುದನ್ನು ನೋಡಿ ಆಲೋಚನೆ ಮಾಡೋಣ.

ಶ್ರೀ ಎಂ. ಗಂಗಣ್ಣ ಭೀಮಪ್ಪ.— ಕೃಷಿ ಕಾಲೇಜಿನಲ್ಲಿ ವ್ಯವಸಾಯಗಾರರ ಮಕ್ಕಳಿಗೆ ಏನು ರಿಸರ್ವೇಷನ್ ಇದೆಯೋ ಅದೇ ರೀತಿ ಮೆಡಿಕಲ್ ಕಾಲೇಜಿನಲ್ಲೂ ಇದೆಯೇ?

ಶ್ರೀ ಎಂ. ಮಲ್ಲಪ್ಪ.— ಗ್ರಾಮಾಂತರ ಪ್ರದೇಶದ ಮಕ್ಕಳಿಗೆ ಪ್ರವೇಶವನ್ನು ಕೊಡುವಾಗ ಅವರು ಪಡೆದ ಅಂಕ, ಅರ್ಹತೆ ಎಲ್ಲವನ್ನೂ ನೋಡಿ ಪ್ರವೇಶಕ್ಕೆ ಅನುಮತಿ ಕೊಟ್ಟಿದೆ. ನಮ್ಮಲ್ಲಿರತಕ್ಕವರಲ್ಲಿ ಶೇಕಡ ೮೦ ರಷ್ಟು ಜನ ವ್ಯವಸಾಯಗಾರರಾದ್ದರಿಂದ ಕೃಷಿ ಕಾಲೇಜಿಗೆ ಪ್ರವೇಶ ನೀಡುವಾಗ ವ್ಯವಸಾಯಗಾರರ ಮಕ್ಕಳಿಗೆ ರಿಸರ್ವೇಷನ್ ಇಟ್ಟಿದ್ದಾರೆ. ಆದೇ ರೀತಿ ನಿಯಮಾವಳಿಗಳನ್ನು ಮೆಡಿಕಲ್ ಕಾಲೇಜಿಗೂ ಅನ್ವಯಿಸುವುದು ಕಾನೂನಿಗೆ ಒಳಪಡುತ್ತದೆಯೇ ಎಂಬುದನ್ನು ಪರಿಶೀಲನೆ ಮಾಡೋಣ.

ಶ್ರೀಮತಿ ಎಸ್. ಪ್ರಮೀಳ.— ಡೊನೇಷನ್ನನ್ನು ಕೊಟ್ಟರೂ Purly on merit basis ಎಂಬುದಾಗಿ ಆದೇಶವನ್ನು ಕೊಡಲಾಗಿದೆ ಎಂಬುದಾಗಿ ತಿಳಿಸಿದ್ದೀರಿ. ಡೊನೇಷನ್ನನ್ನು ಕೊಟ್ಟರೂ ಮೆರಿಟ್ ಬೇಸಿಸ್ ಮೇಲೆ ಕೊಟ್ಟಿಲ್ಲ ಎಂಬುದಾಗಿ ಹಲವಾರು ವಿದ್ಯಾರ್ಥಿಗಳು ಕೋರ್ಟಿಗೆ ಹೋಗಿರುವುದು ತಮ್ಮ ಗಮನಕ್ಕೆ ಬಂದಿದೆ. ಆದ ಕಾರಣ ಇನ್ನು ಮುಂದಾದರೂ ಯಾರೇ ಡೊನೇಷನ್ನನ್ನು ಕೊಡಲಿ ಮೆರಿಟ್

ಬೇಸಿಸ್ ಮೇಲೆ ಕೊಡಬೇಕೆಂದು ಇನ್ನೊಮ್ಮೆ ಆದೇಶವನ್ನು ಕೊಡುತ್ತೀರಾ? ಮುತ್ತೆ ಗ್ರಾಮಾಂತರ ಪ್ರದೇಶದಿಂದ ಬಂದಿರತಕ್ಕಂತಹ ವಿದ್ಯಾರ್ಥಿಗಳಿಗೆ ಡೊನೇಷನನ್ನು ಕೊಡುವುದರಲ್ಲಿ ಏನಾದರೂ ಸ್ವಲ್ಪ ರಿಯಾಯಿತಿ ಕೊಟ್ಟು ಅವರು ಮುಂದೆ ಬರುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ?

SRI M. MALLAPPA.— Rules framed there under provide for selection of candidates on the basis of merit even for free and donation seats. So far as giving weightage for the students from rural areas, we have not yet considered whether it is legally possible or not, and we will consider it.

SRI PRABHAKAR TELKAR.— about 50 days back also this matter had been raised. Here the students from cities are getting 60 to 70 percent of the seats in Government Medical Colleges. In Maharashtra seats are being allotted on regionwise basis. May I know whether the Government has obtained any information from the Maharashtra Government in this regard?

SRI M. MALLAPPA.— Sir, I have got my own doubts about the proposal. I had a discussion with the Maharashtra Minister for Health last week, and he said that it may not be possible and that they would get the rules framed. Then I will verify if it is possible for us to adopt the same.

SRI S. R. BOMMAI.— If district wise figures are taken into consideration about admissions, many more seats have gone in favour of students of Bangalore and Mangalore districts, and there is an imbalance so far as admission is concerned. A solution has to be found out for this. In Maharashtra they are admitting students on regionwise basis and that way they are restricting the seats to the areas. This system was prevailing in this State also about 5 years back. May I know whether the Governmet will get the information from Maharashtra Government as early as possible- before the admissions start this year--to help equal distribution of seats to all the areas?

SRI M. MALLAPPA — Government is very anxious to see that more seats are allotted to students coming from rural areas. But, it will have to be done according to the rules and regulations.

ಶ್ರೀ ಜಿ. ಎಸ್. ಶಿವಸಂಜಪ್ಪ.— ಹಳ್ಳಿಗಾಡಿನ ವಿದ್ಯಾರ್ಥಿಗಳಿಗೆ ಸರ್ಕಾರಿ ಕಾಲೇಜುಗಳಲ್ಲಿ ೧೦ಳಿ ವಿದ್ಯಾರ್ಥಿಗಳಿಗೆ ಹಾಗೂ ಖಾಸಗಿ ಕಾಲೇಜುಗಳಲ್ಲಿ ೧೭ಳಿ ವಿದ್ಯಾರ್ಥಿಗಳಿಗೆ ಸೀಟ್ಸನ್ನು ಕೊಟ್ಟಿದ್ದೇವೆಂದು ಹೇಳಿದ್ದೀರಿ. ಆದರೆ ಹಾವನೂರ್ ವರದಿ ಪ್ರಕಾರ ಹರಿಜನ-ಗಿರಿಜನರಿಗೆ ಹಾಗೂ ಹಿಂದುಳಿದ ವರ್ಗದವರಿಗೆ ಎಷ್ಟು ಸೀಟುಗಳನ್ನು ಕೊಟ್ಟಿದ್ದೀರೆಂದು ಹೇಳುವುದಕ್ಕಾಗುತ್ತದೆಯೇ ?

ಶ್ರೀ ಎಂ. ಮಲ್ಲಪ್ಪ.— ಆ ಮಾಹಿತಿ ನನ್ನಲ್ಲಿಲ್ಲ. ಮಾನ್ಯ ಸದಸ್ಯರಿಗೆ ಬೇಕಾದರೆ ಕಳುಹಿಸಿಕೊಡುತ್ತೇನೆ.

ಶ್ರೀ ಕೆ. ಎಂ. ತಮ್ಮಯ್ಯ.— ಮೆರಿಟ್ ಮೇಲೆ ಎಲ್ಲಾ ಕಡೆ ಸೀಟುಗಳನ್ನು ಕೊಡಬೇಕೆಂದು ಏನು ತೀರ್ಮಾನ ಮಾಡಿದ್ದೀರಿ, ಆ ಕಾನೂನನ್ನು ಮುರಿಯುವುದು ಬೇಡ. ಆದರೆ ಈ ಮೆರಿಟ್‌ನಿಂದ ಹಳ್ಳಿಗಾಡಿನಿಂದ ಬರತಕ್ಕಂತಹ ವಿದ್ಯಾರ್ಥಿಗಳಿಗೆ ಯಾವ ಅನುಕೂಲವಾಗುವುದಿಲ್ಲ. ಆದ್ದರಿಂದ ಪಟ್ಟಣಗಳಿಂದ

ಬರತಕ್ಕಂತಹವರಿಗೆ ಶೇಕಡ ೮೪ ಪರ್ಸೆಂಟ್ ಎಂತಲೂ ಹಾಗೂ ಪಳ್ಳಿಗಾಡಿನಿಂದ ಬರತಕ್ಕಂತಹ ವಿದ್ಯಾರ್ಥಿಗಳಿಗೆ ೫೪ ಅಥವಾ ೫೪ ಪರ್ಸೆಂಟ್ ಎಂಬುದಾಗಿ ಏನಾದರೂ ತೀರ್ಮಾನ ಮಾಡುತ್ತೀರಾ ? ಮತ್ತೆ ರೂರಲ್ ಮೆಡಿಕಲ್ ಕಾಲೇಜುಗಳನ್ನು ಪ್ರಾರಂಭ ಮಾಡಿದರೆ ಪಳ್ಳಿಗಾಡಿನಿಂದ ಬರತಕ್ಕಂತಹ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ. ಇದರ ಬಗ್ಗೆಯೂ ಏನಾದರೂ ಪರಿಶೀಲನೆ ಮಾಡುತ್ತೀರಾ ?

ಶ್ರೀ ಎಂ. ಮಲ್ಲಪ್ಪ.— ಏನೇ ಮಾಡಬೇಕಾದರೂ ಹೈಕೋರ್ಟ್ ಒಂದು ಇದೆಯಲ್ಲ. ಕಾನೂನಿಗೆ ಅನುಸಾರವಾಗಿಯೇ ಎಲ್ಲವನ್ನೂ ಮಾಡಬೇಕು. ಆಸಕ್ತಿ ಇರಬಹುದು. ಆಸೆ ಇರಬಹುದು ಶೇಕಡ ೮೦ ಪರ್ಸೆಂಟ್‌ನ್ನು ಗ್ರಾಮಾಂತರ ಪ್ರದೇಶದವರಿಗೆ ಕೊಡಬೇಕೆಂಬ ಆಸೆ ಇರಬಹುದು. ಆದರೂ ಕಾನೂನಿಗೆ ಅನುಸಾರವಾಗಿ ಮಾಡಬೇಕಾಗುತ್ತದೆ. ಕಾನೂನನ್ನು ನೋಡಿ ಮಾಡೋಣ.

ಅಧ್ಯಕ್ಷರು.— ಈಗ ಪ್ರಶ್ನೋತ್ತರ ವೇಳೆ ಮುಗಿಯಿತು.

ಶ್ರೀ ಜೆ. ಎಸ್. ಶಿವನಂಜಪ್ಪ.— ೩೧೭ರ ರೂಲ್ ಪ್ರಕಾರ ನಾನು ಒಂದು ನೋಟೀಸನ್ನು ನಿನ್ನೆ ಸಂಜೆಯೇ ಕಳುಹಿಸಿದ್ದೆ. ೮ ಸಾವಿರ ಜನಗಳಿಗೆ ಕೂಲಿಯನ್ನು ಕೊಟ್ಟಿಲ್ಲ.

ಅಧ್ಯಕ್ಷರು.— ನಂತರ ಬಂದು ನನ್ನನು ನೋಡಿ.

ಶ್ರೀ ಪ್ರಭಾಕರ್ ತೇಲ್ಕರ್.— ನನ್ನ ಒಂದು ಪ್ರಶ್ನೆ ನಂ. ೪೫೫ (೮೬೭) ಬಿಟ್ಟು ಹೋಗಿದೆ. ನಾನು ಪ್ರಶ್ನೆಯನ್ನು ಹಾಕಿದಾಗ ಸಂಬಂಧಪಟ್ಟ ಮಂತ್ರಿಗಳು ಬಂದಿರಲಿಲ್ಲ. ಈಗ ಸಂಬಂಧಪಟ್ಟ ಮಂತ್ರಿಗಳು ಬಂದಿದ್ದಾರೆ. ಆದ್ದರಿಂದ ಪ್ರಶ್ನೆಯನ್ನು ಕೇಳುವುದಕ್ಕೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು.— ನಾಳೆ ನೀವು ಪ್ರಶ್ನೆಯನ್ನು ಕೇಳುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ. ಮತ್ತೆ ಕಾರ್ಯಕ್ರಮದಲ್ಲಿ ಪುನಃ ಸೇರಿಸಂತ್ತೇನೆ. ಅದನ್ನು ತಡೆಹಿಡಿಯಲಾಗಿದೆ.

QUESTION FOR ANSWEAR ON THE DAY
(but not take up)

Agricultural produce Processing Society Hukkeri Taluk

44 SRI MALAHARA GOWDA S. PATIL (Sankeshwara) — Will the Minister for Co-operation be pleased to state :—

(*a*) whether there is any Co-operative Society by name Agricultural Produce Processing Society in Hukkeri Taluk;

(b) the number of years passed after the commencement of the Society;

(*c*) the total share capital of the said co operative society ;

(*d*) out of the share capital the amount collected from the public ;

(*e*) whether the accounts of the said society have been audited every year since its inception ;

(*f*) if the accounts were audited, the report of the auditor pertaining o the last year ;

(*g*) the action taken by the Government in respect of the said society ?